ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ

ಶ್ರೀ ಎಸ್. ಮಾಧವ ರೆಡ್ಡಿ ವಿರುದ್ಧ-ಶ್ರೀಮತಿ ಮಂಗಮ್ಮ

ತೀರ್ಪು

ಕ್ರಿಮಿನಲ್ ಅಪೀಲು ಅರ್ಜಿ ಸಂಖ್ಯೆ: 263/2007 ಇದರೊಂದಿಗೆ ಇತರೆ, ದಿನಾಂಕ 7ನೇ ಸೆಪ್ಟೆಂಬರ್, 2016.

ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ:

ಅಪೀಲುದಾರರ ಪರ ಮಾನ್ಯ ವಕೀಲರ ವಾದವನ್ನು ಆಲಿಸಲಾಗಿದೆ.

2. ಈ ಪ್ರಕರಣಗಳ ಅಪರೂಪದ ಸಂಗತಿಗಳು ಮತ್ತು ಸಂದರ್ಭಗಳೆಂದರೆ, ಇಲ್ಲಿನ ಅಪೀಲುದಾರರು ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 ರ (ಇನ್ನು ಮುಂದೆ ಸಂಕ್ಷಿಪ್ತವಾಗಿ ' ಎನ್ಐ ' ಅಧಿನಿಯಮ, ಎಂದು ಕರೆಯಲಾಗಿದೆ) 138 ನೇ ಪ್ರಕರಣದಡಿ ಶಿಕ್ಷಾರ್ಹ ಅಪರಾಧವನ್ನು ಆರೋಪಿಸಿ, ಇದೇ ಪ್ರತ್ಯಪೀಲುದಾರರ-ಆಪಾದಿತರ ವಿರುದ್ಧ ಮೂರು ಮೊಕದ್ದಮೆಗಳಲ್ಲಿ ದೂರುದಾರರಾಗಿರುತ್ತಾರೆ.

3. ಕ್ರಿಮಿನಲ್ ಅಪೀಲು ಸ ಂ ಖ್ಯೆ 263/2007 ರಲ್ಲಿನ ಅಪೀಲಿಗೆ ಸಂಬಂಧಪಡುವಷ್ಟರಮಟ್ಟಿಗೆ, ಡಿಸೆಂಬರ್ 2003 ರಲ್ಲಿ ಪ್ರತ್ಯರ್ಜಿದಾರರು ಅರ್ಜಿದಾರರಿಂದ 5 ಲಕ್ಷ  ರೂ.ಗಳ ಕೈಸಾಲ ಪಡೆದಿದ್ದು, ಅದನ್ನು ತೀರಿಸಲು ಅಪೀಲುದಾರರ ಹೆಸರಿನಲ್ಲಿ ಒಂದು ಚೆಕ್ ನೀಡಿರುತ್ತಾರೆಂದು ವಾದಿಸಲಾಗಿದೆ.ಆ ಚೆಕ್ಕನ್ನು ನಗದೀಕರಿಸಲು ತನ್ನ ಬ್ಯಾಂಕರ್ ಮೂಲಕ ಬ್ಯಾಂಕಿಗೆ ಸಲ್ಲಿಸಿದಾಗ, ಧನಾದೇಶಕನಿಂದ ಹಣ ಸಂದಾಯವನ್ನು ತಡೆಯಲಾಗಿರುತ್ತದೆಂಬ ಕಾರಣಕ್ಕಾಗಿ ಆ ಚೆಕ್ ಅಮಾನ್ಯವಾಗಿರುತ್ತದೆಯೆಂದು ಕ್ಲೇಮು ಮಾಡಲಾಗಿದೆ.ಪ್ರತ್ಯರ್ಜಿದಾರರು ಅಪೀಲುದಾರರಿಗೆ ಹಣ ಮರುಪಾವತಿಸುವ ಮಾತನ್ನು ಉಳಿಸಿಕೊಳ್ಳಲು ವಿಫಲರಾದ ಕಾರಣ, ಆ ಆ ಬಗ್ಗೆ ಕಾನೂನು ನೋಟೀಸನ್ನು ನೀಡಲಾಗಿದ್ದು, ದೂರು ದಾಖಲಿಸಲಾಗಿರುತ್ತದೆ.

4. ಅದೇ ರೀತಿ, ಸಂಬಂಧಿತ ಅಪೀಲುಗಳಲ್ಲಿ ಅಂತಹುದೇ ಸಂದರ್ಭವಿದ್ದು, ಸಾಲದ ಮೊತ್ತಗಳು ರೂ .5,00,000/- ಹಾಗೂ ರೂ .5,50,000/-ಆಗಿದ್ದವು.

ಮೊಕದ್ದಮೆಗಳನ್ನು ಪ್ರತ್ಯೇಕ ತೀರ್ಪುಗಳ ಮೂಲಕ ನಿರ್ಧರಿಸಲಾಗಿದ್ದರೂ, ತಾರ್ಕಿಕ ವಾದಗಳು ಒಂದೇ ರೀತಿಯಾಗಿದ್ದು, ನಿರ್ಣಯಗಳು ದೂರುದಾರನ ಪರವಾಗಿದ್ದವು.ಹಾಗೆ ಹೇಳಲಾದ ಚೆಕ್ಕನ್ನು ಸಹಕಾರ ಸಂಘದಿಂದ ನೀಡಲಾಗಿರುವುದರಿಂದ, ಆ ಚೆಕ್ನ ವಿವರಗಳಿಗೆ ಉತ್ತರಿಸಿಲ್ಲದಿದ್ದು, ಡೆಬಿಟ್ ವೋಚರ್ನ ರೀತಿಯ ದಾಖಲೆಯನ್ನು ನೀಡಲಾಗಿದೆಯೆಂಬುದಾಗಿ ಅಧಿವಿಚಾರಣಾ ನ್ಯಾಯಾಲಯವು ತೀರ್ಮಾನಕ್ಕೆ ಬಂದಿದೆ ಹಾಗೂ ಆ ಕಾರಣದಿಂದ, ಸದರಿ ದಾಖಲೆಯನ್ನು ಚೆಕ್ ಎಂಬುದಾಗಿ ಪರಿಗಣಿಸಬಹುದೆ?ಎಂಬ ಸಂಶಯವನ್ನು ಕೆಳ ನ್ಯಾಯಾಲಯವು ವ್ಯಕ್ತಪಡಿಸಿರುತ್ತದೆ.ಆ ಒಂದೇ ಕಾರಣದ ಮೇಲೆ, ಪ್ರತ್ಯಪೀಲುದಾರನನ್ನು ನಿರಪರಾಧಿಯೆಂದು ನಿರ್ಣಯಿಸಲಾಯಿತು.ಅಪೀಲನ್ನು ಪ್ರತಿವಾದಿಸಲಾದ ಈ ನ್ಯಾಯಾಲಯದ ಮಾನ್ಯ ಏಕಸದಸ್ಯಪೀಠ ನ್ಯಾಯಾಧೀಶರ ಮುಂದೆ ಅಪೀಲಿನಲ್ಲಿ ಮಂಡಿಸಲಾಯಿತು.ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರು ಈ ಮುಂದಿನ ಪ್ರಶ್ನೆಗಳನ್ನು ಎತ್ತಿ, ದಿನಾಂಕ 12.1.2010 ರ ಆದೇಶದ ಮೂಲಕ ವಿಷಯವನ್ನು ವಿಭಾಗೀಯ ಪೀಠಕ್ಕೆ ಕಳುಹಿಸಿರುತ್ತಾರೆ;

“i) ಎನ್.ಐ. ಅಧಿನಿಯಮದ 3 ನೇ ಪ್ರಕರಣದಡಿ ” ಬ್ಯಾಂಕರ್ ಎಂಬ ಪದದ ಪರಿಭಾಷೆಯು ಬಿ.ಆರ್. ಅಧಿನಿಯಮ, 1949 ರ 56 ನೇ ಪ್ರಕರಣವನ್ನು ಉಲ್ಲಂಘಿಸಿ, ಬ್ಯಾಂಕಿಂಗ್ ವ್ಯವಹಾರ ನಡೆಸುತ್ತಿರುವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯನ್ನು ಒಳಗೊಳ್ಳುತ್ತದೆಯೇ?

ii) ಬಿ.ಆರ್. ಅಧಿನಿಯಮದ 56 ನೇ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವ ಕ್ರೆಡಿಟ್ ಸಹಕಾರ ಸಂಘದಲ್ಲಿ ಒಬ್ಬ ವ್ಯಕ್ತಿಯಿಂದ, ತೀರ್ಮಾನಿಸಲ್ಪಟ್ಟ ಕಾರಣದಿಂದ ಅವನು ಬರೆದ ' ಚೆಕ್ ' ರೀತಿಯಿರುವ ಲಿಖಿತಪತ್ರವನ್ನು ಎನ್.ಐ. ಅಧಿನಿಯಮದ 138 ನೇ ಪ್ರಕರಣದಲ್ಲಿ ಬರುವಂತೆ, ಬ್ಯಾಂಕರ್ನೊಂದಿಗೆ ಸದರಿ ವ್ಯಕ್ತಿಯು ತೀರ್ಮಾನಿಸಿದ ಕಾರಣದಿಂದ ನೀಡಲಾದ ಚೆಕ್ ' ಎ ಂ ಬುದಾಗಿ ಪರಿಭಾಷಿಸಬಹುದೇ ??

ದಿನಾಂಕ 20.06.2011 ರ ತನ್ನ ತೀರ್ಪಿನಿಂದ ವಿಭಾಗೀಯ ಪೀಠವು, ಈ ಕ್ರಿಮಿನಲ್ ಅಪೀಲುಗಳನ್ನು ಸಹಕಾರ ಬ್ಯಾಂಕ್ ಮತ್ತು ಗೋವಾ ನಿಯಮಿತ -ವಿರುದ್ಧ-ಮಹಾರಾಷ್ಟ್ರ ರಾಜ್ಯ ಸಹಕಾರ ಬ್ಯಾಂಕ್ ನಿಯಮಿತ ಮತ್ತು ಇತರರು ಹಾಗೂ ಸಂಬಂಧಿತ ಪ್ರಕರಣಗಳು ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಮೇಲೆ ಅವಲಂಬಿಸಿ, ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 ರಡಿ ” ಬ್ಯಾಂಕರ್ ” ಪದದ ಪರಿಭಾಷೆಯು, ಬಿ.ಆರ್. ಅಧಿನಿಯಮದ 47 ನೇ ಪ್ರಕರಣಕ್ಕೆ ಅನುಸಾರವಾಗಿ ದೂರನ್ನು ಪ್ರಾರಂಭಿಸುವ ಮೂಲಕ ಆರ್.ಬಿ.ಐ ನಿಂದ ಕ್ರಮ ಕೈಗೊಳ್ಳುವವರೆಗೂ ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949 ರ (ಇನ್ನು ಮುಂದೆ ಸಂಕ್ಷಿಪ್ತವಾಗಿ ' ಬಿ.ಆರ್. ಅಧಿನಿಯಮ ' ಎಂದು ಕರೆಯಲಾಗುವುದು) 22 ನೇ ಪ್ರಕರಣವನ್ನು ಉಲ್ಲಂಘಿಸಿ, ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವ ಕ್ರೆಡಿಟ್ ಸಹಕಾರ ಸಂಘವನ್ನು ಒಳಗೊಳ್ಳುತ್ತದೆ ಎಂಬ ತೀರ್ಮಾನಕ್ಕೆ ಬಂದಿದೆ.ಬಿ.ಆರ್. ಅಧಿನಿಯಮದ 47 ನೇ ಪ್ರಕರಣದಡಿ ದೂರನ್ನು ನೀಡಲಾಗಿದ್ದರೂ, ಅಂಥ ದೂರು ದಾಖಲಿಸುವ ಕ್ರಮವು ಹಿಂದಿನ ವ್ಯವಹಾರಗಳನ್ನು ಅಸಿಂಧುಗೊಳಿಸುವುದಿಲ್ಲ ಮತ್ತು ಚೆಕ್ನ ಧನಾದೇಶಕನು ಕಾನೂನಿನಡಿ ತನ್ನ ಜವಾಬ್ದಾರಿಗಳಿಂದ ಬಿಡುಗಡೆಗೊಳ್ಳುವುದಿಲ್ಲ.

ಎರಡನೆಯದಾಗಿ, ಬಿ.ಆರ್. ಅಧಿನಿಯಮದ 46 ( 4) ನೇ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವ ಕ್ರೆಡಿಟ್ ಸಹಕಾರ ಸಂಘದಲ್ಲಿ ಒಬ್ಬ ವ್ಯಕ್ತಿಯಿಂದ ತೀರ್ಮಾನಿಸಲ್ಪಟ್ಟ ಕಾರಣದಿಂದ ಅವನು ಬರೆದ ' ಚೆಕ್ ' ರೀತಿಯಿರುವ ಲಿಖಿತಪತ್ರವನ್ನು ಎನ್.ಐ. ಅಧಿನಿಯಮದ 138 ನೇ ಪ್ರಕರಣದಲ್ಲಿ ಬರುವಂತೆ, ಬ್ಯಾಂಕರ್ನೊಂದಿಗೆ ಸದರಿ ವ್ಯಕ್ತಿಯು ತೀರ್ಮಾನಿಸಿದ ಕಾರಣದಿಂದ ನೀಡಲಾದ ' ಚೆಕ್ ' ಎಂಬುದಾಗಿ ಪರಿಭಾಷಿಸಬಹುದೆಂದು ಅಭಿಪ್ರಾಯಪಡಲಾಗಿದೆ ಮತ್ತು ಚೆಕ್ ಅಮಾನ್ಯವಾದ ಸಂದರ್ಭದಲ್ಲಿ, ಎನ್.ಐ. ಅಧಿನಿಯಮದ 138 ನೇ ಪ್ರಕರಣದಡಿ ಎಲ್ಲಾ ಪರಿಣಾಮಗಳು ಇತರ ಷರತ್ತುಗಳ ನೆರವೇರಿಕೆಗೆ ಒಳಪಡುತ್ತವೆ.ಬಿ.ಆರ್. ಅಧಿನಿಯಮದ 46 ( 4) ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಆರ್.ಬಿ.ಐ. ಪ್ರಾರಂಭಿಸಿದ ದೂರು, ಧನಾದೇಶಕನಿಂದ ಬರೆಯಲಾದ ಚೆಕ್ನ ಅಸಿಂಧುತ್ವವನ್ನು ಸಮರ್ಥಿಸಲು ಚೆಕ್ನ ಧನಾದೇಶಕನಿಗೆ ಸಾಧ್ಯಗೊಳಿಸುವುದಿಲ್ಲ.ಪ್ರತ್ಯಪೀಲುದಾರರು ಅದನ್ನು ಕ್ರಿಮಿನಲ್ ಸಂಕೀರ್ಣ ಅರ್ಜಿಸಂಖ್ಯೆ: 19296-98/2011 ರೊಂದಿಗೆ, ಅಪೀಲು ಮಾಡಲು ವಿಶೇಷ ಅನುಮತಿ ಅರ್ಜಿ ಸಂಖ್ಯೆ.7377-79/2011 ರ ಅರ್ಜಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಮತ್ತೊಮ್ಮೆ ಪ್ರಶ್ನಿಸಿದ್ದಾರೆ.ಅದನ್ನು ದಿನಾಂಕ 24.7.2014 ರ ಆದೇಶದ ಮೂಲಕ ವಜಾ ಮಾಡಲಾಯಿತು.ಅದಾದ ನಂತರ ಈ ಅಪೀಲುಗಳನ್ನು ಸುನಾವಣೆಗೆ ಪಟ್ಟಿ ಮಾಡಲಾಗಿದೆ.

5. ಯಾವ ದಾಖಲೆಯ ಅಡಿಯಲ್ಲಿ ಅಪೀಲುದಾರರು ಕ್ಲೇಮು ಮಾಡುತ್ತಿದ್ದರೋ ಆ ದಾಖಲೆಯನ್ನು ' ಚೆಕ್ ' ಎಂಬುದಾಗಿ ಭಾವಿಸಲಾಗದು ಎಂದು ತೀರ್ಮಾನಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯವು ಸಮರ್ಥಿತವಾಗಿದೆಯೇ?ಎನ್ನುವ ಏಕೈಕ ಪ್ರಶ್ನೆಗೆ ಅಪೀಲುದಾರರ ಪರವಾಗಿ ಉತ್ತರಿಸಿದ್ದರಿಂದಾಗಿ, ಸದರಿ ಅಪೀಲುಗಳನ್ನು ಪುರಸ್ಕರಿಸಲಾಗಿದೆ.ಫಲಿತಾಂಶವಾಗಿ, ಪ್ರತ್ಯಪೀಲುದಾರನು ಎನ್.ಐ.ಅಧಿನಿಯಮದ 138 ನೇ ಪ್ರಕರಣದಡಿ ಶಿಕ್ಷಾರ್ಹ ಅಪರಾಧದ ತಪ್ಪಿತಸ್ಥನೆಂದು ರುಜುವಾತಾಗಿದೆ.ಪ್ರತ್ಯಪೀಲುದಾರರು ಕ್ರಿ.ಅ.ಸಂ:263/2007 ರಲ್ಲಿ ಅಪೀಲುದಾರರಿಗೆ ರೂ .8,50,000/ಮತ್ತು ಕ್ರಿ.ಅ.ಸಂ.:264/2007 ರಲ್ಲಿ ಅಪೀಲುದಾರರಿಗೆ ರೂ .8,00,000/-ಹಾಗೂ ಕ್ರಿ.ಅ.ಸಂ:265/2007 ರಲ್ಲಿ ಅಪೀಲುದಾರರಿಗೆ ರೂ .8,30,000/- ದಂಡವನ್ನು ಪಾವತಿಸುವ ಶಿಕ್ಷೆಗೆ ಗುರಿಪಡಿಸಲಾಗಿದೆ.ಅದನ್ನು ದಂಡ ಪ್ರಕ್ರಿಯಾ ಸಂಹಿತೆ, 1973 ರ 357 ನೇ ಪ್ರಕರಣದಡಿ ಅಪೀಲುದಾರರಿಗೆ ನಷ್ಟಪರಿಹಾರವಾಗಿ ಪಾವತಿಸತಕ್ಕದ್ದು.ದಂಡವನ್ನು ಪಾವತಿಸುವಲ್ಲಿ ತಪ್ಪಿದರೆ, ಪ್ರತ್ಯಪೀಲುದಾರರು ಪ್ರತಿಯೊಂದು ಅಪೀಲಿಗೆ ಎರಡು ತಿಂಗಳ ಅವಧಿಯವರೆಗೆ ಸಾದಾ ಕಾರಾವಾಸವನ್ನು ಅನುಭೋಗಿಸತಕ್ಕದ್ದು.